ಆದರೆ ಈ ವಿದ್ಯಮಾನ ಹೊಸದಲ್ಲ. ಕೇರಳ, ತಮಿಳುನಾಡು ರಾಜ್ಯದ ಕೆಲವು ಪ್ರದೇಶಗಳಲ್ಲಿ ಹಿಂದೆ ಮೀನಿನ ಮಳೆ ಆಗಿದೆ. ನೇಪಾಳ, ಕೆನಡಾ, ಆಸ್ಟ್ರೇಲಿಯಾ, ಫಿಲಿಪ್ಪೀನ್ಸ್ ಗಳಲ್ಲೂ ಆಕಾಶದಿಂದ ಮೀನಿನ ಮಳೆ ಸುರಿದ ವಿದ್ಯಮಾನಗಳು ನಡೆದಿವೆ. ಬ್ರೆಜಿಲ್‌ನಲ್ಲಿ ಒಮ್ಮೆ ಆಕಾಶದಿಂದ ಜೇಡರ ಮಳೆಯೂ ಆಗಿದ್ದು ವರದಿಯಾಗಿತ್ತು. ಜಪಾನ್, ಹಂಗೇರಿಯಲ್ಲಿ ಕಪ್ಪೆಗಳ ಮಳೆಯಾದದ್ದು ಹಾಗೂ ಇಂಗ್ಲೆಂಡ್‌ನಲ್ಲಿ ಜೆಲ್ಲಿ ಫಿಷ್ ಮಳೆಯಾದದ್ದು ಆಗ ದೊಡ್ಡ ಸುದ್ದಿ ಆಗಿತ್ತು.

## ಏನಿದು ಮೀನು ಮಳೆ?

ಆಕಾಶದಿಂದ ಮೀನಿನ ಮಳೆ ಆಗುವುದಾದರೂ ಹೇಗೆ ಎನ್ನುವುದು ಕುತೂಹಲ ಕೆರಳಿಸುವ ಪ್ರಶ್ನೆಯೇ. ವೈಜ್ಞಾನಿಕ ವಿವರಣೆಯಂತೆ, ಇದು ಯಾವುದೇ ಅತಿಮಾನುಷ ವಿದ್ಯಮಾನವಲ್ಲ. ಆಗಸದಿಂದ ಮಳೆ ಹನಿಗಳ ಜೊತೆ ಹನಿಯಾಗಿ ಬೀಳುವ ಈ ಮೀನುಗಳು ಸಮುದ್ರದ ಮೀನುಗಳು. ಪ್ರಕೃತಿಯಲ್ಲಿ ಕೆಲವೊಮ್ಮೆ ಉಂಟಾಗುವ ಸುಂಟರಗಾಳಿಯ ಒತ್ತಡ ಎಷ್ಟಿರುತ್ತದೆಂದರೆ ಆಳ ಸಮುದ್ರದಿಂದ ನೂರಾರು ಮೀನುಗಳನ್ನು ಅನಾಮತ್ತಾಗಿ ಮೇಲಕ್ಕೆ ಒಯ್ದು ಮೋಡಗಳ ಜತೆ ಸೇರಿಸುತ್ತದೆ. ರಭಸವಾಗಿ ನೀರಿನ ಮೇಲೆ ಹಾಯ್ದು ಹೋಗುವ ಸುಂಟರಗಾಳಿ, ನೀರಿನಲ್ಲಿ ಸಿಗುವ ಮೀನು ಮಾತ್ರವಲ್ಲ, ಇತರ ವಸ್ತುಗಳು ಮತ್ತು ಜೀವಿಗಳನ್ನೂ ಹೀರಿಕೊಂಡು ಸಾಗುತ್ತದೆ.

ಆಕಾಶದಿಂದ ಮಳೆಯ ಜತೆಗೇ ಮೀನುಗಳು ಸುರಿದ ಘಟನೆ ಮೊದಲ ಬಾರಿಗೆ ನಡೆದದ್ದು 1861ರಲ್ಲಿ ಸಿಂಗಾಪುರದಲ್ಲಿ. 'ಮೀನಷ್ಟೇ ಅಲ್ಲ ಬೆಕ್ಕು, ನಾಯಿ, ಹಾವುಗಳು ಕೂಡಾ ಮಳೆಯಾಗಿ ಧರೆಗೆ ಸೇರಿದ್ದು ಇದೆ. ಆದರೆ ಬಹುತೇಕ ಸಲ ಮೀನಿನ ಮಳೆಯಾಗುತ್ತದೆ' ಎಂದು ವಿವರಿಸುತ್ತಾರೆ ಸಂಶೋಧಕ ಕ್ರಿಸ್ಟೋಫರ್ ಎಸ್ ಬ್ರೈಡ್.

ಇತಿಹಾಸದ ಪುಟಗಳನ್ನು ತಿರುವಿ ಹಾಕಿದರೆ, ಹಾರಲಾರದ ಜೀವಿಗಳು ಆಕಾಶದಿಂದ ಬಿದ್ದಿರುವುದು ದಾಖಲಾಗಿದೆ. ಮೊದಲನೆ ಶತಮಾನದಲ್ಲಿ ಈ ಕುರಿತು ರೋಮಿನ ನಿಸರ್ಗ ವಿಜ್ಞಾನಿ ಪ್ಲಿನಿ ದಿ ಎಲ್ಡರ್, ಕಪ್ಪೆ ಮತ್ತು ಮೀನುಗಳು ಬಿರುಗಾಳಿಯೊಟ್ಟಿಗೆ ಬಂದುದರ ಕುರಿತು ದಾಖಲಿಸಿದ್ದಾನೆ. ಫ್ರಾನ್ಸ್‌ನ ಲ್ಯಾಲಿನ್ ಎಂಬಲ್ಲಿ ಅಲ್ಲಿನ ಸೈನಿಕರು ನೆಲಗಪ್ಪೆಗಳು ಮಳೆಯ ಜೊತೆ ಬಿದ್ದದ್ದನ್ನು ಕಂಡಿದ್ದಾರೆ.

17ನೇ ಶತಮಾನದಲ್ಲಿ ಆ್ಯಂಡ್ರೆ ಮೆರಿ ಅಂಪೆರ್ ಎಂಬ ಭೌತ ವಿಜ್ಞಾನಿ ಮೊದಲ ಬಾರಿಗೆ ಮೀನು ಮಳೆ ವಿದ್ಯಮಾನವನ್ನು ಗಂಭೀರವಾಗಿ ಪರಿಗಣಿಸಿದ. ಬಿರುಗಾಳಿ ಈ ಜೀವಿಗಳನ್ನು ಬಹು ದೂರ ತೆಗೆದುಕೊಂಡು ಹೋಗಿ ಎಲ್ಲಿಯಾದರೂ ಬಿಡುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವೊಮ್ಮೆ ಹೊತ್ತೊಯ್ದ ಮೀನು, ಕಪ್ಪೆಗಳು ಆರೋಗ್ಯವಾಗಿರುತ್ತವೆ. ಇನ್ನು ಕೆಲವೊಮ್ಮೆ ಸತ್ತಿರುತ್ತವೆ ಎಂದು ಆತ ವಿವರಿಸಿದ.

ಕೆಲವೊಮ್ಮೆ ಪಕ್ಷಿಗಳು ಗುಂಪಿನಲ್ಲಿ ವಲಸೆ ಹೋಗುವ ಸಂದರ್ಭದಲ್ಲಿ ಗುಡುಗು ಸಹಿತ ಬಿರುಗಾಳಿ ಬೀಸಿದರೆ ಆ ಪಕ್ಷಿಗಳನ್ನು ಬಿರುಗಾಳಿ ಎಳೆದೊಯ್ಯಬಹುದು. ಗಾಳಿ ಕಡಿಮೆಯಾದಾಗ ಪಕ್ಷಿಗಳು ನೆಲಕ್ಕೆ ಬಿದ್ದು ಪಕ್ಷಿಗಳ ಮಳೆಯೂ ಆಗಬಹುದು ಎಂದು ದಿ ಎಲ್ಡರ್ ಬರೆದಿದ್ದಾರೆ.

ಆಂಗ್ಲ ಭಾಷೆಯಲ್ಲಿ 'ರೈನಿಂಗ್ ಆಫ್ ಕ್ಯಾಟ್ಸ್ ಅಂಡ್ ಡಾಗ್ಸ್' ಎಂಬ ನುಡಿಗಟ್ಟು ಇದೆ. ಜೋರು ಮಳೆಯನ್ನು ಈ ನುಡಿಗಟ್ಟು ಸೂಚಿಸುತ್ತದೆ. ಆದರೆ, ಈ ನುಡಿಗಟ್ಟಿಗೂ, ನೈಸರ್ಗಿಕ ವಿದ್ಯಮಾನಕ್ಕೂ ಯಾವುದೇ ಸಂಬಂಧ ಇಲ್ಲ. ಆಂಗ್ಲ ಸಾಹಿತ್ಯ, ಸಿನಿಮಾಗಳಲ್ಲಿ ಪ್ರಾಣಿಗಳು ಆಕಾಶದಿಂದ ಉದುರುವ ಬಗ್ಗೆ ಸಾಕಷ್ಟು ಕಥೆಗಳೂ ಬಂದಿವೆ.





